

# ಮೂಷಿಕಾಲಯ!

ಭೂಮಿಯಡಿ ಸುರಂಗ ಕೊರೆದು ಬಿಲಗಳಲ್ಲಿ ವಾಸಿಸುವ ಇಲಿ–ಹೆಗ್ಗಣಗಳು ರಾತ್ರಿಯಾದೊಡನೇ ತಮ್ಮ ಕಾರುಬಾರು ತೋರಿಸುತ್ತವೆ! ಅವುಗಳ ಕಾಟ ತಾಳಲಾರದೆ ಓಡಿಸುವ ಜನರಿಗೆ ಶ್ರೀಗಣೇಶ, ತಾನು ಮೂಷಿಕ ವಾಹನನೆಂದು ನೆನಪಿಸುತ್ತಾನೆ. ಇದೇ ಕಾರಣಕ್ಕೆ ಮಂಗಳೂರಿನ ಸುರತ್ಕಲ್–ಕಾಟಿಪಳ್ಳ ಬಳಿಯ ಗಣೇಶಪುರದಲ್ಲೊಂದು ಮಹಾಗಣಪತಿ ದೇವಾಲಯದ ಮುಂದುಗಡೆ ಮೂಷಿಕಾಲಯ ಮಹತ್ವ ಪಡೆದಿದೆ. ಸುಮಾರು 12 ಅಡಿ ಎತ್ತರದ ಕೈಮುಗಿವ ಭಂಗಿಯ ಸುಂದರ ಕಪ್ಪು ವಿಗ್ರಹ ಭಕ್ತಾದಿಗಳನ್ನು ವಿಶೇಷವಾಗಿ ಆಕರ್ಷಿಸುತ್ತಿದೆ!

**–ಜಗಜೀವನ್ ಶೆಟ್ಟಿ ಎಂ., ಉಡುಪಿ**



# ಆದಿಲ್‌ಶಾಹಿ: ಸ್ನಾನದ ಟಬ್

ಐತಿಹಾಸಿಕ ತಾಣವೆಂದೇ ಹೆಸರುವಾಸಿಯಾಗಿರುವ ವಿಜಯಪುರದಿಂದ ಮೂಡಣಕ್ಕೆ 20 ಕಿ.ಮೀ. ಅಂತರದ ಕುಮಟಗಿಯಲ್ಲಿ ಬೇಸಿಗೆ ಅರಮನೆ ಇದೆ. 16ನೇ ಶತಮಾನದಲ್ಲಿ 2ನೇ ಇಬ್ರಾಹಿಂ ಆದಿಲ್‌ಶಾಹಿ ಕುಮಟಗಿಯಲ್ಲಿ ಬೇಸಿಗೆ ಅರಮನೆ ಕಟ್ಟಿಸಿದರಂತೆ. ಅಂದಾಜು ಮೂರು ಅಡಿ ಅಗಲದ ಗೋಡೆಗಳಿಂದ ನಿರ್ಮಿಸಿರುವ ಬೇಸಿಗೆ ಅರಮನೆಯ ಮೂರು ಅಂಕಣದ ಕೋಣೆಯ ಮಧ್ಯದಲ್ಲಿ ಎರಡು ಸ್ನಾನದ ಟಬ್‌ಗಳಿವೆ.

ಅಂದು ವಿದ್ಯುತ್, ಪೈಪ್‌ಲೈನ್ ಇಲ್ಲದೆ ಪಕ್ಕದ ಕೆರೆಯಿಂದ ಗೋಡೆಗಳ ಮೂಲಕ ನೀರು ಹರಿದು ಈ ಟಬ್‌ಗಳಲ್ಲಿ ಬೀಳುತ್ತಿತ್ತು. ಎರಡು ಟಬ್‌ಗಳಲ್ಲಿ ಅತ್ತ ರಾಜ, ಇತ್ತ ರಾಣಿ ಸ್ನಾನ ಮಾಡಿ ಬೇಸಿಗೆಯ ಬೇಗೆ ತಣಿಸಿಕೊಳ್ಳುತ್ತಿದರಂತೆ. ಕಲ್ಲಿನಲ್ಲಿ ರೂಪುಗೊಂಡ ಈ ಟಬ್‌ಗಳು ಇನ್ನೂ ಹೊಸದಾಗಿ ಮಾಡಿದಂತಿವೆ ಮತ್ತು ವಿಶಿಷ್ಟವಾಗಿವೆ.

**–ಕಲ್ಪನಾ ಚ.ಮಠಪತಿ, ವಿಜಯಪುರ**

# ಪುರಾತನ ಪಳೆಯುಳಿಕೆ

ಕೋಲಾರ ನಗರದಿಂದ ಕೇವಲ ಎಂಟು ಕಿಲೋಮೀಟರ್ ದೂರದಲ್ಲಿರುವ ಚೊಕ್ಕಹಳ್ಳಿಯಲ್ಲಿ ಚಿನ್ಮಯ ಮಿಷನ್ ಸ್ಥಾಪಿಸಿರುವ ಓಂಕಾರೇಶ್ವರ ದೇವಸ್ಥಾನದ ಚಿನ್ಮಯ ಗಣಪತಿ ಸನಿಹದಲ್ಲಿ ಎರಡೂವರೆ ಕೋಟಿ ವರ್ಷಗಳಷ್ಟು ಹಳೆಯದಾದ ಪಳೆಯುಳಿಕೆ ಇರಿಸಲಾಗಿದೆ. ನೋಡಲು ಮಳೆಯ ಪ್ರಹಾರಕ್ಕೆ ಸಿಲುಕಿ ಜರ್ಝರಿತವಾದ ಕಲ್ಲಿನಂತಿರುವ ಇದರ ಹಿಂದುಗಡೆ ಅದರ ಇತಿಹಾಸವನ್ನು ಸಾರುವ ಫಲಕವನ್ನು ಅಳವಡಿಸಲಾಗಿದೆ,

ಎರಡೂವರೆ ಕೋಟಿ ವರ್ಷಗಳ ಹಿಂದೆ ಎಂದರೆ ಮನುಕುಲವೇ ಇನ್ನೂ ಧರೆಯ ಮೇಲೆ ಕಾಲಿಟ್ಟಿರದ ಕಾಲದ ಈ ಪಳೆಯುಳಿಕೆಯನ್ನು ಕೋಲಾರ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿದ್ದ ಡಾ.ಪಿ.ಆರ್. ನಂಜುಂಡಗೌಡ ಮತ್ತು ಅವರ ಸಂಶೋಧನಾ ವಿದ್ಯಾರ್ಥಿಗಳು ತಮಿಳುನಾಡಿನ ತಿರುವಕ್ಕರೈನಿಂದ ತಂದು ಜತನವಾಗಿ ಇರಿಸಿದ್ದಾರೆ. ಆದರೆ ಇದಕ್ಕೊಂದು ಸೂರುಭಾಗ್ಯವನ್ನು ಕಲ್ಪಿಸಿದರೆ ಇನ್ನಷ್ಟು ದೀರ್ಘಕಾಲ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಇತಿಹಾಸವನ್ನು ಸಾರಿ ಹೇಳುತ್ತ ನಿಲ್ಲಬಹುದು.

**–ಎಚ್.ಕೆ. ರಾಘವೇಂದ್ರ, ಕೋಲಾರ**

